# ಕಂಠಾಭರಣದಿಂದ ಮೇಖಲೆಯವರೆಗಿನ ಆಭರಣಗಳು

## ಮನೋಗತ

ಸ್ತ್ರೀಯರು ಮಂಗಳಸೂತ್ರವನ್ನು ಧರಿಸಿದರೆಂದರೆ, ಅವರಿಗೆ ಸತತವಾಗಿ ಪಾತಿವ್ರತ್ಯದ ಅರಿವಿರುತ್ತದೆ ಮತ್ತು ಅವರ ಮಾತೃಭಾವವು ಜಾಗೃತವಾಗಿರುತ್ತದೆ. ರಟ್ಟೆಗೆ ಕಟ್ಟುವ ಆಭರಣ (ಬಾಜುಬಂದ), ಲಕ್ಷ್ಮೀಹಾರದಂತಹ ಆಭರಣಗಳಲ್ಲಿ ಸ್ತ್ರೀಯರ ಲಾವಣ್ಯವು ಇನ್ನೂ ಎದ್ದು ಕಾಣುತ್ತದೆ. ಹಿಂದೂ ಸಂಸ್ಕೃತಿಯ ಭೂಷಣವಾಗಿರುವ ಆಭರಣಗಳು ಸ್ತ್ರೀಯರ ಶೋಭೆಯನ್ನು ಹೆಚ್ಚಿಸಿ ಆಚಾರಧರ್ಮಪಾಲನೆಯ ಒಳ್ಳೆಯ ಅವಕಾಶವನ್ನು ಪ್ರಾಪ್ತಮಾಡಿಕೊಡುತ್ತವೆ. ಸದ್ಯದ ಕಲಿಯುಗದಲ್ಲಿ ಜೀವಗಳ ಕುಸಿಯುತ್ತಿರುವ ಸಾತ್ತ್ವಿಕತೆಯನ್ನು ಹಿಂದೂ ಧರ್ಮದ ಆಚಾರಪಾಲನೆಗಳಿಂದ ಸ್ಥಿರವಾಗಿಡಲು ಸಹಜ ಸಾಧ್ಯವಾಗುತ್ತದೆ. ಮೂಲದಲ್ಲಿಯೇ ಪುರುಷರಿಗಿಂತ ಹೆಚ್ಚು ಭಾವನಾಪ್ರಧಾನರಾಗಿರುವ ಸ್ತ್ರೀಯರಿಗೆ ಕೆಟ್ಟ ಶಕ್ತಿಗಳಿಂದ ತೊಂದರೆಯಾಗುವ ಸಾಧ್ಯತೆಯು ಹೆಚ್ಚಿರುತ್ತದೆ. ಆದುದರಿಂದ ಹಿಂದೂ ಧರ್ಮವು ಪುರುಷರಿಗಿಂತ ಸ್ತ್ರೀಯರಿಗೆ ಹೆಚ್ಚು ಆಭರಣಗಳನ್ನು ನೀಡಿ, ಕೆಟ್ಟ ಶಕ್ತಿಗಳಿಂದ ರಕ್ಷಿಸಿಕೊಳ್ಳುವ ಮಾರ್ಗವನ್ನು ತೋರಿಸಿದೆ. ಸ್ತ್ರೀಯರು ವಿವಿಧ ಆಭರಣಗಳನ್ನು ಧರಿಸುವುದರ ಮಹತ್ತ್ವವು ಪ್ರಸ್ತುತ ಗ್ರಂಥದಲ್ಲಿ ನೀಡಿದ ಶಾಸ್ತ್ರೀಯ ಮಾಹಿತಿಯಿಂದ ತಿಳಿಯುವುದು.

ವಿವಿಧ ಆಭರಣಗಳನ್ನು ಧರಿಸಿದಾಗ ಈಶ್ವರೀ ತತ್ತ್ವವು ಹೇಗೆ ಗ್ರಹಣವಾಗುತ್ತದೆ, ವ್ಯಕ್ತಿಯ ಆಧ್ಯಾತ್ಮಿಕ ತೊಂದರೆಗಳು ಹೇಗೆ ಕಡಿಮೆಯಾಗುತ್ತವೆ ಮುಂತಾದ ವಿಷಯದಲ್ಲಿ ಸೂಕ್ಷ್ಮಸ್ತರದ ಪ್ರಕ್ರಿಯೆಯನ್ನು ಸ್ಪಷ್ಟೀಕರಿಸುವ ಸೂಕ್ಷ್ಮದ ಪ್ರಯೋಗಗಳನ್ನು ಗ್ರಂಥದಲ್ಲಿ ಸೇರಿಸಲಾಗಿದೆ. ಯಾವುದಾದರೊಂದು ವಿಷಯವು ಮಾತಿಗಿಂತ ಪ್ರಯೋಗದ ಮೂಲಕ ದೃಢಪಟ್ಟರೆ ನಮಗೆ ಕೂಡಲೇ ವಿಶ್ವಾಸವು ಮೂಡುತ್ತದೆ. ಆಭರಣಗಳ ಕುರಿತಾದ ಪ್ರಯೋಗಗಳಿಂದ ಬಂದ ನಿಷ್ಕರ್ಷಗಳು ಆಭರಣಗಳ ವಿಷಯದ ಶಾಸ್ತ್ರೀಯ ಮಾಹಿತಿಯೊಂದಿಗೆ ಉತ್ತಮವಾಗಿ ಹೊಂದಾಣಿಕೆಯಾಗುತ್ತವೆ. ಇದರಿಂದ ಸಹಜವಾಗಿಯೇ ಆಭರಣಗಳ ಶಾಸ್ತ್ರದ ವಿಷಯದಲ್ಲಿ ಶ್ರದ್ಧೆಯು ಹೆಚ್ಚಾಗಲು ಸಾಧ್ಯವಾಗುತ್ತದೆ. ಈ ಸೂಕ್ಷ್ಮಪ್ರಯೋಗಗಳ ಮಾಹಿತಿಯನ್ನು ನೀಡುವಾಗ ನಾವು ಆಯಾಯ ಆಭರಣಗಳ ಛಾಯಾಚಿತ್ರಗಳನ್ನು ನೀಡಿದ್ದೇವೆ. ವಾಚಕರು ಈ ಛಾಯಾಚಿತ್ರಗಳೆಡೆಗೆ ನೋಡಿ ಸೂಕ್ಷ್ಮಪ್ರಯೋಗಗಳನ್ನು ಮಾಡಲು ಪ್ರಯತ್ನಿಸಬೇಕು, ಅಂದರೆ ಛಾಯಾಚಿತ್ರದೆಡೆಗೆ ನೋಡಿ ಒಳ್ಳೆಯದೆನಿಸುತ್ತದೆಯೋ, ತೊಂದರೆದಾಯಕವೆನಿಸುತ್ತದೆಯೋ ಅಥವಾ ಏನಾದರೊಂದು ಅನುಭೂತಿ ಇತ್ಯಾದಿ ಬರುತ್ತದೆಯೋ ಎಂದು ನೋಡಿ ನಂತರವೇ ಮುಂದಿನ ಭಾಗವನ್ನು ಓದಬೇಕು. ಇದರಿಂದ ವಾಚಕರಿಗೆ ಸೂಕ್ಷ್ಮದ ಅಧ್ಯಯನವಾಗಿ ಆಭರಣಗಳನ್ನು ಖರೀದಿಸುವಾಗ ಅವು 'ಸಾತ್ತ್ವಿಕವಾಗಿವೆಯೋ ತಾಮಸಿಕ (ಅಸುರೀ) ಯಾಗಿವೆಯೋ' ಎಂದು ಗುರುತಿಸಲು ಸಹಾಯವಾಗುತ್ತದೆ.

ಈ ಗ್ರಂಥದ ವಾಚನದಿಂದ ಆಭರಣಗಳನ್ನು ಧರಿಸುವುದರ ಮಹತ್ತ್ವವು ಗಮನಕ್ಕೆ ಬಂದು ಆಭರಣರೂಪೀ ಅಮೂಲ್ಯ ಸಂಪತ್ತನ್ನು ನೀಡಿದ ಹಿಂದೂ ಧರ್ಮದ ಶ್ರೇಷ್ಠತೆಯು ಗಮನಕ್ಕೆ ಬರಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! - **ಸಂಕಲನಕಾರರು**

## ಅನುಕ್ರಮಣಿಕೆ

(ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು '*' ಈ ಚಿಹ್ನೆಯ ಮೂಲಕ ತೋರಿಸಲಾಗಿದೆ.)


**೧. ಮಂಗಳಸೂತ್ರ (ಸೌಭಾಗ್ಯಾಲಂಕಾರ) ೨೧**

* ಮಹತ್ವ ೨೧
  * ಸ್ತ್ರೀಯರಿಗೆ ಧರ್ಮ, ಕರ್ತವ್ಯ ಮತ್ತು ನಿಯಮಗಳ ಅರಿವಾಗುವುದು ೨೧
  * ಶಿವಸ್ವರೂಪ ಪತಿಯ ಅರಿವು ಸತತ ಜಾಗೃತವಾಗಿರಬೇಕೆಂದು ಮಂಗಳಸೂತ್ರವನ್ನು ನಿರ್ಮಿಸಲಾಯಿತು ೨೧
  * ಈಶ್ವರೀ ತತ್ತ್ವವನ್ನು ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಆಕರ್ಷಿಸುವ ಆಭರಣ ೨೨
* ಕಂಠಮಣಿ-ಮಂಗಳಸೂತ್ರಗಳ ಅವಶ್ಯಕತೆ ೨೨
* ಮಂಗಳಸೂತ್ರ ಎಷ್ಟು ಉದ್ದವಿರಬೇಕು ? ೨೩
* ಮಂಗಳಸೂತ್ರದ ಬಟ್ಟಲುಗಳು ಏಕೆ ಗೋಲಾಕಾರ ಮತ್ತು ವಿನ್ಯಾಸರಹಿತವಾಗಿರಬೇಕು ? ೨೪
* ಮಂಗಳಸೂತ್ರವನ್ನು ಕಪ್ಪುಮಣಿಗಳಿಂದ ಎರಡು ಪದರಗಳಲ್ಲಿ ನಿರ್ಮಿಸಿರುವುದರ ಭಾವಾರ್ಥ ೨೬
* ಅಸುರೀ ಶಕ್ತಿಗಳ ತೊಂದರೆಯಿಂದ ಮಂಗಳಸೂತ್ರ ತುಂಡಾಗುವುದು ೩೨
* ಚಿನ್ನದ ಸರದ ಬದಲು ಮಂಗಳಸೂತ್ರ ಧರಿಸುವುದು ಏಕೆ ಹೆಚ್ಚು ಉಪಯುಕ್ತ ೩೩
* ವಿಧವೆಯರು ಮಂಗಳಸೂತ್ರವನ್ನು ಏಕೆ ಧರಿಸಬಾರದು ? ೩೪
* ಪುರುಷರು ಮಂಗಳಸೂತ್ರವನ್ನು ಧರಿಸುವ ಪದ್ಧತಿ ಏಕಿಲ್ಲ ? ೩೫

**೨. ಕಂಠಹಾರ / ಕಂಠಮಾಲೆ ೩೬**

* ಮಹತ್ವ, ಕಂಠಹಾರದ ಉದ್ದಕ್ಕನುಸಾರ ಅದರ ಮೇಲಿನ ವಿನ್ಯಾಸ ಮತ್ತು ಅದರಿಂದಾಗುವ ಲಾಭಗಳು ೩೬
* ವಿವಿಧ ರೀತಿಯ ಹಾರಗಳ ಸಂದರ್ಭದಲ್ಲಿ ಮಾಡಿದ ಸೂಕ್ಷ್ಮದಲ್ಲಿನ ಪ್ರಯೋಗ ೩೮

**೩. ಸರ ೪೬**

* ಚಿನ್ನದ ಸರದ ಮಹತ್ವ ಮತ್ತು ಸೂಕ್ಷ್ಮ-ಜ್ಞಾನದ ಚಿತ್ರ ೪೭

**೪. ಮುತ್ತಿನ ಹಾರ ೪೭**

* ಮುತ್ತಿನ ಹಾರದ ಆಕಾರಕ್ಕನುಸಾರ ಮುತ್ತಿನ ಹಾರದಲ್ಲಿರುವ ಚೈತನ್ಯ, ಆನಂದ ಮತ್ತು ಶಾಂತಿಗಳ ಪ್ರಮಾಣ ೪೭
* ಮುತ್ತಿನ ಹಾರದಿಂದ ಸ್ತ್ರೀಯರ ಮತ್ತು ಪುರುಷರ ಕುಂಡಲಿನಿ ಚಕ್ರದಲ್ಲಿರುವ ಕೆಟ್ಟ ಶಕ್ತಿಗಳ ಸ್ಥಾನಗಳ ಮೇಲಾಗುವ ಪರಿಣಾಮಗಳು ೪೮
* ಮುತ್ತಿನಮಾಲೆಯ ಬಗ್ಗೆ ಮಾಡಿದ ಸೂಕ್ಷ್ಮ-ಜ್ಞಾನದ ಪ್ರಯೋಗ ೪೮

೫. ಕೊರಳಿನಲ್ಲಿ ಧರಿಸುವ ಇತರ ಆಭರಣಗಳು ೪೯
೬. ನಡುಪಟ್ಟಿ ೪೯
* ಮಹತ್ವ ಮತ್ತು ಲಾಭಗಳು ೪೯
* ವಾಸನೆಯ ಉದ್ರೇಕದ ಮೇಲೆ ನಿರ್ಬಂಧ ೪೯
* ದೇಹದಲ್ಲಿ ಚೈತನ್ಯದ ಲಹರಿಗಳು ಸತತವಾಗಿ ಸಂಚರಿಸುವುದು ೪೯
* ಶರೀರದಲ್ಲಿರುವ ಕಪ್ಪು ಶಕ್ತಿಯನ್ನು ನಾಶಗೊಳಿಸಿ ಕೆಟ್ಟ ಶಕ್ತಿಗಳಿಂದ ರಕ್ಷಿಸುತ್ತದೆ ೫೦
* ನಡುಪಟ್ಟಿಯನ್ನು ಸೂಕ್ಷ್ಮದಿಂದ ಧರಿಸಿ ಸೂಕ್ಷ್ಮದಲ್ಲಿ ಮಾಡಿದ ಪ್ರಯೋಗ ೫೨
೭. ಮೇಖಲೆ ೫೩
* ಮಹತ್ವ ೫೩
* ಮೇಖಲೆಯ ಸಂದರ್ಭದಲ್ಲಿ ಮಾಡಿದ ಸೂಕ್ಷ್ಮಜ್ಞಾನದ ಪ್ರಯೋಗ ೫೪
೮. ಥಲ್ಲಾ ೫೭
* ಥಲ್ಲಾದ ಬಗ್ಗೆ ಮಾಡಿದ ಸೂಕ್ಷ್ಮ-ಜ್ಞಾನದ ಪ್ರಯೋಗ ೫೮
೯. ಆಚಾರಧರ್ಮಕ್ಕನುಸಾರ ಆಭರಣಗಳನ್ನು ಆಯಾಯ ಸ್ಥಳದಲ್ಲಿಯೇ ಧರಿಸುವುದರ ಹಿಂದಿನ ಮಹತ್ವ ಸ್ಪಷ್ಟಪಡಿಸುವ ಸೂಕ್ಷ್ಮದ ಪ್ರಯೋಗ ೬೩
೧೦. ಆಭರಣಗಳಿಗೆ ಸಂಬಂಧಿಸಿದ ದೇವತೆ, ದೇವತೆಯ ಕಾರ್ಯನಿರತ ಭಾವ, ಆಭರಣಗಳನ್ನು ಧರಿಸುವವರ ಮತ್ತು ನೋಡುವವರ ಭಾವ ೭೩
೧೧. ಆಧ್ಯಾತ್ಮಿಕ ತೊಂದರೆಯಿರುವ ಮತ್ತು ಇಲ್ಲದಿರುವ ಜೀವಗಳು ಆಭರಣಗಳನ್ನು ಧರಿಸುವುದರಿಂದ ತಾರಕ ಮತ್ತು ಮಾರಕ ಸ್ತರದಲ್ಲಾಗುವ ಲಾಭಗಳು ೭೩
೧೨. ವಿವಿಧ ಆಭರಣಗಳಿಂದ ಜೀವಕ್ಕೆ ಬರುವ ಅನುಭೂತಿಗಳ ಪ್ರಮಾಣ ೭೪

ಧರ್ಮಶಾಸ್ತ್ರವು ಹೀಗೇಕೆ ಹೇಳುತ್ತದೆ ? ಗ್ರಂಥಮಾಲಿಕೆಯ ಕಿರುಗ್ರಂಥ

## ದೇವಿಪೂಜೆಯ ಶಾಸ್ತ್ರ



卐 ದೇವಿಗೆ ಕುಂಕುಮಾರ್ಚನೆ ಮಾಡುವುದರ ಹಿನ್ನೆಲೆಯ ಶಾಸ್ತ್ರವೇನು ?

卐 ದೇವಿಯ ಉಡಿ ತುಂಬುವ ಯೋಗ್ಯ ಪದ್ಧತಿ ಯಾವುದು ?

卐 ವಿಶಿಷ್ಟ ದೇವಿಗೆ ವಿಶಿಷ್ಟ ಬಣ್ಣದ ಖಣ ಮತ್ತು ಸೀರೆಯನ್ನು ಅರ್ಪಣೆ ಮಾಡಿದರೆ ಯಾವ ಲಾಭಗಳಾಗುತ್ತವೆ ?